**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ವೈ.ಎಂ.ಸತೀಶ್‌ರವರು ಪ್ರಸ್ತಾಪಿಸಿರುವ ಶೂನ್ಯವೇಳೆ ಸೂಚನೆಗೆ ಉತ್ತರ.**

**ವಿಷಯ:-** ದಿನಾಂಕ:16-05-2025ರಂದು ದಿನ ಪತ್ರಿಕೆಗಳಲ್ಲಿ ಸುದ್ದಿಯಾಗಿರುವ 'ರೆಕ್ಕಾನ್ ರಕ್ರಿಯೇಷನ್ ಕ್ಲಬ್‌ನಿಂದ ಸಂತೋಷಕ್ಕಿಂತ ಸಂಕಷ್ಟವೇ ಹೆಚ್ಚು" ಎಂಬ ಸುದ್ದಿಯು ಪ್ರಕಟವಾಗಿದ್ದು, ಬಳ್ಳಾರಿ ನಗರದಲ್ಲಿ ಹಲವು ವರ್ಷಗಳಿಂದ ಈ ರೆಕ್ಕಾನ್ ಕ್ಲಬ್ ನಡೆಯುತ್ತಿದ್ದು ಇಲ್ಲಿ ಇದೀಗ ಕಾನೂನು ಬಾಹಿರ ಜೂಜಾಟಗಳನ್ನು ನಡೆಸುತ್ತಿರುವುದಾಗಿ ಮತ್ತು ಇಲ್ಲಿಗೆ ಸುತ್ತಮುತ್ತಲಿನ ರೈತಾಪಿ ವರ್ಗದ ಜನರು ಬಂದು ತಮ್ಮ ಹಣವನ್ನು ಕಳೆದುಕೊಳ್ಳುತ್ತಿರುವುದಾಗಿ ಸುದ್ದಿ ಪ್ರಕಟವಾಗಿರುತ್ತದೆ. ಆದಕಾರಣ, ಕೂಡಲೇ ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ಮತ್ತು ಇದೇ ರೀತಿಯಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಕ್ಲಬ್‌ಗಳಲ್ಲಿ ನಡೆಯುತ್ತಿರುವ ಕಾನೂನು ಬಾಹಿರ ಜೂಜಾಟಗಳನ್ನು ತಡೆಯುವ ಕುರಿತು.

**ಉತ್ತರ:-** ರೆಕ್ಕಾನ್ ರಿಕ್ರಿಯೇಷನ್ ಕ್ಲಬ್‌ನಲ್ಲಿ ಯಾವುದೇ ಕಾನೂನು ಬಾಹಿರ ಜೂಜಾಟಗಳು ನಡೆಯುತ್ತಿರುವ ಬಗ್ಗೆ ಕಳೆದ ಮೂರು ವರ್ಷಗಳಲ್ಲಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿನ ಕ್ಲಬ್‌ಗಳಲ್ಲಿ ಕಾನೂನು ಬಾಹಿರ ಜೂಜಾಟಗಳು ನಡೆಯುತ್ತಿರುವುದಿಲ್ಲ. ಆದಾಗ್ಯೂ ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ಕ್ಲಬ್‌ಗಳಲ್ಲಿ ಅನಧಿಕೃತ ಚಟುವಟಿಕೆಗಳು ನಡೆಯುತ್ತಿರುವುದು ಕಂಡುಬಂದಲ್ಲಿ ಕಾನೂನು ರೀತ್ಯಾ ಕ್ರಮಕೈಗೊಳ್ಳುವಂತೆ ಎಲ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.

ವಿಜಯನಗರ ಜಿಲ್ಲೆಯಲ್ಲಿನ ಕ್ಲಬ್‌ಗಳಲ್ಲಿ ಕಾನೂನು ಬಾಹಿರ ಜೂಜಾಟಗಳು ನಡೆಯುತ್ತಿಲ್ಲ. ಆದಾಗ್ಯೂ ಅವುಗಳ ಮೇಲೆ ನಿಗಾವಣೆ ಇಟ್ಟಿದ್ದು, ಅಕ್ರಮ ಚಟುವಟಿಕೆಗಳು ಕಂಡುಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು. ಕಳೆದ ಮೂರು ವರ್ಷಗಳಲ್ಲಿ ವಿಜಯನಗರ ಜಿಲ್ಲೆಯಲ್ಲಿರುವ ಕ್ಲಬ್‌ಗಳಲ್ಲಿ ಯಾವುದೇ ಕಾನೂನು ಬಾಹಿರ ಜೂಜಾಟಗಳು ನಡೆಯುತ್ತಿರುವ ಬಗ್ಗೆ ಪ್ರಕರಣಗಳು ದಾಖಲಾಗಿರುವುದಿಲ್ಲ.

**ಹೆಚ್‌ಡಿ 151 ಎಸ್‌ಎಸ್‌ಟಿ 2025**

**(ಡಾ: ಜಿ.ಪರಮೇಶ್ವರ)**
**ಗೃಹ ಸಚಿವರು.**